ಹಿಮಾಚಲ ಪ್ರದೇಶದ ವಿಹಂಗಮ ನೋಟ ಸಹೃದಯರ ಮನಸ್ಸಿನಲ್ಲಿ ಕಾಮನಬಿಲ್ಲು ಬಿಡಿಸುವಷ್ಟು ಮೋಹಕವಾದುದು. ಭಾರತದಲ್ಲಿ ಅತಿ ಕಡಿಮೆ ಭ್ರಷ್ಟಾಚಾರ ಇರುವ ರಾಜ್ಯಗಳಲ್ಲಿ ಒಂದಾದ ಕಾರಣದಿಂದಲೋ ಏನೋ, ಪ್ರಕೃತಿ ಸೌಂದರ್ಯದ ಕೃಪೆ ಹಿಮಾಚಲ ಪ್ರದೇಶದ ಮೇಲೆ ಸಮೃದ್ಧವಾಗಿದೆ. ಕೃಷಿ ಮತ್ತು ಪ್ರವಾಸೋದ್ಯಮ ಅಲ್ಲಿನ ಪ್ರಮುಖ ಆದಾಯಮೂಲಗಳು. ಹಿಮಾಲಯದ ಪಶ್ಚಿಮಕ್ಕಿರುವ (ಪರ್ವತ ರಾಜನ ಮನೆಯ ಹಿತ್ತಲು) ಈ ನಾಡು, ಎರಡು ರಾಜಧಾನಿಗಳನ್ನು – ಶಿಮ್ಲಾ ಮತ್ತು ಧರ್ಮಶಾಲಾ – ಹೊಂದಿದೆ.

ಉತ್ತಮವಾದ ರಸ್ತೆಗಳು, ಮನಮೋಹಕ ಬೆಟ್ಟ–ಕಣಿವೆಗಳು ನನ್ನ ಸೆಲ್ಫ್ ಡ್ರೈವಿಂಗ್ ಉತ್ಸಾಹವನ್ನು ನೂರ್ಮಡಿಸುತ್ತಿದ್ದವು. ಬೆಂಗಳೂರಿಂದ ತಂದಿದ್ದ ಜಾಕೆಟ್ ಗಳು ಕೆಲಸ ಮಾಡುತ್ತಿಲ್ಲ ಎನಿಸಿತು. ಬೆಳಗ್ಗೆ ಹತ್ತರಿಂದ ಮಧ್ಯಾಹ್ನ ಮೂರರವರೆಗೂ 8–12 ಡಿಗ್ರಿ ಸೆಲ್ಷಿಯಸ್ ಉಷ್ಣಾಂಶ. ಉಳಿದೆಲ್ಲ ಸಮಯ ಸೊನ್ನೆಯ ಅತ್ತ ಇತ್ತ. ಸಂಜೆ ನಾಲ್ಕಕ್ಕೆಲ್ಲ ಸೂರ್ಯ ಮನೆಯತ್ತ!

ಮನಾಲಿ, ಕುಲು ಜಿಲ್ಲೆಯ ಒಂದು ಸುಂದರ ಊರು. ಅದು ಬಿಯೊಸ್ ನದಿಯ ಮತ್ತೊಂದು ಭಾಗದಲ್ಲಿದೆ. ಸುಮಾರು ಎಂಟು ಸಾವಿರ ಜನಸಂಖ್ಯೆಯ ಪಟ್ಟಣವದು. ಸನಾತನ ಹಿಂದೂ ಸಂಸ್ಕೃತಿಯ ಮನು ಇಲ್ಲಿದ್ದನೆಂಬ ಪ್ರತೀತಿಯಿದೆ. 'ಮನು ಆಲಯ' ಕ್ರಮೇಣ ಮನಾಲಿ ಆಗಿದೆ. ಹಿಡಿಂಬ ಹಾಗೂ ಮನು ದೇಗುಲಗಳು ಮನಾಲಿಯಲ್ಲಿನ ಪ್ರವಾಸಿಗರ ಆಕರ್ಷಣೆಯ ಪ್ರಸಿದ್ಧ ಸ್ಥಳಗಳು. ನಾವು ಹಾಗೇ ಊರು ಸುತ್ತಿ ಜನ ಮತ್ತು ರಸ್ತೆಗಳ ಪರಿಚಯ ಮಾಡಿಕೊಂಡೆವು. ಮಾಲ್ ರೋಡ್‌ನಲ್ಲಿ ಅಡ್ಡಾಡಿ ಶಾಪಿಂಗ್ ಅನುಭವ ಪಡೆದೆವು. ಎಲ್ಲ ಟೂರಿಸ್ಟ್ ಜಾಗಗಳಂತೆ ಅಲ್ಲೂ ಕೂಡ ಅನೇಕ ಭಾಷೆಗಳನ್ನು ಮಾತನಾಡುವ ಮಂದಿ ಸಿಗುತ್ತಾರೆ. ಸ್ಥಳೀಯ ಜನರು ಸ್ವಭಾವತಃ ಸಜ್ಜನರು.

ರಿವರ್ ರ್‍ಯಾಫ್ಟಿಂಗ್ ಮತ್ತು ಸ್ಕೈ ಡೈವಿಂಗ್‌ಗೆ ಮನಾಲಿ ಹೇಳಿ ಮಾಡಿಸಿದ ಜಾಗ. ದೊಡ್ಡ ಪ್ಯಾರಾಚೂಟ್ ಕಟ್ಟಿಕೊಂಡು ಪ್ರಪಾತಕ್ಕೆ (ವ್ಯಾಲಿಗೆ) ಹಾರಿದೆವು. ಕೆಲವೇ ಸೆಕೆಂಡುಗಳಲ್ಲಿ ಗಾಳಿಯಲ್ಲಿ ತೇಲುತ್ತಿದ್ದೆವು. ಸುತ್ತ ಹಿಮಾಲಯದ ಪರ್ವತಗಳ ಸಾಲು, ಕೆಳಗೆ ಬಿಯಾಸ್ ನದಿ ಕಣಿವೆ, ಹತ್ತು ಸಾವಿರ ಅಡಿಯ ಎತ್ತರದಲ್ಲಿ ಹಾರುತ್ತಿರುವ ನಾವು. ವಾಹ್! ಎಂತಹ ಸುಂದರ, ವರ್ಣಸಲಸದಳ ಅನುಭವವದು.

ಮನಾಲಿಯಿಂದ ಬೆಳಗ್ಗೆದ್ದು ಶಿಮ್ಲಾ ಕಡೆಗೆ ಹೊರಟೆವು.

## ಹಿಮದ ಸನ್ನಿಧಿ; ಎಲ್ಲರೂ ಮಕ್ಕಳು!

ಸೋಲಾಂಗ್ ವ್ಯಾಲಿ ಹತ್ತಿರ ರೋಪ್ ವೇಗಳನ್ನು ನಡೆಸುವರೆಂದು ತಿಳಿದು ಅಲ್ಲಿಗೆ ಹೋಗಿದ್ದೆವು. ಅಲ್ಲಿ ಬಿದ್ದ ಸಣ್ಣ ಮಟ್ಟದ ಹಿಮ ನಮ್ಮನ್ನು ಮತ್ತೊಮ್ಮೆ ಪುಳಕಗೊಳಿಸಿತು. ಅಲ್ಲಿಂದ ಹಮ್ಟ ಪಾಸ್ ಎನ್ನುವ ಸುಮಾರು ಹದಿನೈದು ಸಾವಿರ ಅಡಿ ಎತ್ತರದ ಪ್ರದೇಶ ತಲುಪಿದೆವು. ಅಲ್ಲಿ ಹಿಮ ಬೀಳುತ್ತಿದೆಯೆಂಬ ಸುದ್ದಿ ನಮ್ಮನ್ನು ಸೆಳೆದಿತ್ತು. ಹದಿನೈದು ಕಿ.ಮೀ. ದಾರಿಯಷ್ಟೇ ಆದರೂ ಅದನ್ನು ಕ್ರಮಿಸಲು ಒಂದು ಗಂಟೆಗೂ ಹೆಚ್ಚು ಸಮಯ ಬೇಕಾಯಿತು. ಬೆಟ್ಟದ ಮೇಲೆ ಎಲ್ಲೆಲ್ಲೂ ಹಿಮ. ಐಸ್ ಸ್ಕೇಟ್ ಮಾಡುವವರೇನು... ಗಾಳಿ ತುಂಬಿದ ದೊಡ್ಡ ಟ್ಯೂಬ್ ಮೇಲೆ ಕುಳಿತು ಜಾರುವವರ ಸಂಭ್ರಮವೇನು... ಮಕ್ಕಳೊಂದಿಗೆ ಮಕ್ಕಳಾಗಿ ಹಿಮದಲ್ಲಿ ತೂರುವ ಚೆಂಡು ಆಡಿದ ದೊಡ್ಡವರ ಮಕ್ಕಳಾಟದ ಸೊಗಸೇನು...

ಒಂದೆಡೆ ಬೆಟ್ಟಗಳಾದರೆ ಮತ್ತೊಂದು ಕಡೆಗೆ ವ್ಯಾಲಿ. ರುದ್ರರಮಣೀಯ ಪರಿಸರದಲ್ಲಿ ಡ್ರೈವ್ ಮಾಡುವುದು ರೋಚಕ ಸಂಗತಿ. ಬೆಟ್ಟ ಮತ್ತು ನದಿಯ ನಡುವೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಬರುವಾಗ ಮೂರು ಕಿ.ಮೀ. ಉದ್ದದ ಸುಂದರ ಸುರಂಗದಲ್ಲಿ ಹಾದು ಬಂದೆವು.

